ರಾಮನಗರ ತಾಲ್ಲೂಕು ಭೈರಮಂಗಲ ಸುತ್ತಮುತ್ತಲ ಪಂಚಾಯಿತಿಗಳಿಗೆ ಕಾವೇರಿ ನೀರು ಸರಬರಾಜು

840 (241) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಭೈರಮಂಗಲ ಕೆರೆಗೆ ಬೆಂಗಳೂರಿನ ಕಲುಷಿತ ನೀರು ಬರುತ್ತಿರುವುದರಿಂದ ಸುತ್ತಮುತ್ತಲ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಭೈರಮಂಗಲ ಕೆರೆಯನ್ನು ಪುನಃಶ್ಚೇತನಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ; ಈ ಕೆರೆಯನ್ನು ಪುನಃಶ್ಚೇತನಗೊಳಿಸಲು ಇದುವರೆವಿಗೂ ಸರ್ಕಾರವು ಎಷ್ಟು ಹಣವನ್ನು ಬಿಡುಗಡೆಗೊಳಿಸಲಾಗಿದೆ ;

ಇ) ಭೈರಮಂಗಲ ಕೆರೆಯು ಕಲುಷಿತಗೊಂಡಿರುವುದರಿಂದ ಶುದ್ಧ ಕುಡಿಯುವ ನೀರು ದೊರೆಯದೆ ಸುತ್ತಮುತ್ತಲ ಮೂರು ಪಂಚಾಯತ್ತಿಗಳ ವ್ಯಾಪ್ತಿಯ ಗ್ರಾಮಗಳ ಜನರು ಅನಾರೋಗ್ಯಕ್ಕೆ ತುತ್ತಾಗುತ್ತಿರುವುದರಿಂದ ಕಾವೇರಿ ನೀರನ್ನು ಒದಗಿಸಲು ಏನು ಕ್ರಮ ಕೈಗೊಳ್ಳಲಾಗಿದೆ ; ಕಾವೇರಿ ನೀರನ್ನು ಎಷ್ಟು ಅವಧಿಯಲ್ಲಿ ಒದಗಿಸಲಾಗುವುದು, ಭೈರಮಂಗಲ ಕೆರೆಯ ಸುತ್ತಮುತ್ತಲ ಮೂರು ಪಂಚಾಯತಿಗಳ ಗ್ರಾಮಗಳಿಗೆ ಶುದ್ಧ, ಕುಡಿಯುವ ನೀರನ್ನು ಒದಗಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು) :

ಅ) ಭೈರಮಂಗಲ ಕೆರೆಗೆ ಬೆಂಗಳೂರಿನ ಕಲುಷಿತ ನೀರು ಬರುತ್ತಿರುವುದು ನಿಜ. ಪ್ರಸ್ತುತ ಕುಡಿಯುವ ನೀರು ಸರಬರಾಜು ಮಾಡುತ್ತಿರುವ ಕೊಳವೆ ಬಾವಿಗಳ ಕುಡಿಯುವ ನೀರಿನ ಪರೀಕ್ಷೆ ಮಾಡಿದ್ದು, ನೀರು ಕುಡಿಯಲು ಯೋಗ್ಯವಾಗಿರುವುದೆಂದು ವರದಿಯಾಗಿದೆ.

ಆ) ಭೈರಮಂಗಲ ಕೆರೆಯ ಪುನಃಶ್ಚೇತನವನ್ನು ಸಣ್ಣ ನೀರಾವರಿ ಇಲಾಖೆ ನೋಡಿಕೊಳ್ಳುತ್ತಿದೆ. ಸದರಿ ಕರೆಗೆ ಬಂದಿರುವ ಕಲುಷಿತ ನೀರಿನ

ಸಂಸ್ಕರಣೆ ಕುರಿತು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ, ಮುಖ್ಯ ಇಂಜೀಯರ್ (ದಕ್ಷಿಣ), ಸಣ್ಣ ನೀರಾವರಿ ಇಲಾಖೆ ಈಗಾಗಲೇ ಕೋರಿದ್ದು , ಕೊಳಚೆ ನೀರು ಶುದ್ಧೀಕರಣ ಘಟಕ ಸ್ಥಾಪನೆ ಕುರಿತು ಗಂಭೀರ ಪರಿಶೀಲನೆ ನಡೆದಿದೆಯೆಂದು ತಿಳಿದು ಬಂದಿದೆ.

ಇ) ಸದರಿ ಮೂರು ಪಂಚಾಯಿತಿಗಳ ವ್ಯಾಪ್ತಿಯ ಗ್ರಾಮಗಳಿಗೆ ಕಾವೇರಿ ನದಿ ಮೂಲದಿಂದ ಶುದ್ಧ ನೀರನ್ನೊದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಈ ಗ್ರಾಮಗಳಿಗೆ 11 ಕೊಳವೆ ನೀರು ಸರಬರಾಜು ಯೋಜನೆ, 19 ಕಿರು ನೀರು ಸರಬರಾಜು ಯೋಜನೆ ಹಾಗೂ 95 ಕೈಪಂಪುಗಳಿಂದ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ.

ಬೀದರ್ ಜಿಲ್ಲೆಗೆ ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆ

841(78) **ಶ್ರೀ ಬಂಡೆಪ್ಪ ಕಾಶೆಂಪೂರ್** (ಬೀದರ್ ದಕ್ಷಿಣ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೀದರ್ ಜಿಲ್ಲೆಗೆ ರಾಜೀವ್‌ಗಾಂಧಿ ಕುಡಿಯುವ ನೀರಿನ ಯೋಜನೆಯಡಿಯಲ್ಲಿ ಯಾವ ಯಾವ ಯೋಜನೆಗಳನ್ನು ಹಂಚಿಕೆ ಮಾಡಲಾಗಿದೆ ; (ವಿವರ ನೀಡುವುದು) ;

ಆ) ಈ ಯೋಜನೆಗಳಿಗೆ ಸರ್ಕಾರ ನಿಗದಿಪಡಿಸಿರುವ ಅನುದಾನದ ಮೊತ್ತವೆಷ್ಟು (ಯೋಜನಾವಾರು ವಿವರ ನೀಡುವುದು) ;

ಇ) ಈ ಯೋಜನೆಗಳ ಕಾಮಗಾರಿಗಳು ಯಾವ ಹಂತದಲ್ಲಿವೆ ;

ಈ) ಪೂರ್ಣವಾಗಿರುವ ಮತ್ತು ಅಪೂರ್ಣವಾಗಿರುವ ಕಾಮಗಾರಿಗಳು ಯಾವುವು ; (ವಿವರ ನೀಡುವುದು) ;

ಉ) ಬೀದರ್ ಜಿಲ್ಲೆಯಲ್ಲಿ ಈ ಯೋಜನೆಗೆ ಸೇರ್ಪಡೆ ಮಾಡಲಾದ ತಾಲ್ಲೂಕು ಮತ್ತು ಗ್ರಾಮಗಳು ಎಷ್ಟು (ತಾಲ್ಲೂಕುವಾರು ಮತ್ತು ಗ್ರಾಮವಾರು ವಿವರ ನೀಡುವುದು) ?